9 ಶ್ರೀ ವಸಂತಬಂಗೇರ. ಕೆ : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಅರಣ್ಯ ಇಲಾಖೆಯ ಅಧೀನದಲ್ಲಿರುವ ತನಿಖಾ ಬಂಗ್ಲೆಗಳು ಎಷ್ಟು;

ಆ) ವಸತಿ ಗೃಹ ಮತ್ತು ಇತರ ಕಟ್ಟಡಗಳು ಎಷ್ಟು;

ಇ) ಒಟ್ಟು ಕಟ್ಟಡಗಳಲ್ಲಿ ಉಪಯೋಗವಿಲ್ಲದ ಕಟ್ಟಡಗಳು ಎಷ್ಟು;

ಈ) ಸಂಪೂರ್ಣ ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳ ದುರಸ್ತಿಗೆ ಇಲಾಖೆ ಯಾವ ಕ್ರಮವಹಿಸಿದೆ?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯ ಮಂತ್ರಿಗಳು) :

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಯಾವುದೇ ತನಿಖಾ ಬಂಗ್ಲೆಗಳು ಇರುವುದಿಲ್ಲ. ಆದರೆ 2 ಅರಣ್ಯ ವಿಶ್ರಾಂತಿ ಗೃಹಗಳು ಇರುತ್ತವೆ.

ಆ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಒಟ್ಟು 50 ವಸತಿ ಗೃಹಗಳು ಹಾಗೂ 8 ಇತರ ಕಟ್ಟಡಗಳು ಇರುತ್ತದೆ.

ಇ) ಎಲ್ಲಾ ಕಟ್ಟಡಗಳು ಉಪಯೋಗದಲ್ಲಿದ್ದು, 3 ಕಟ್ಟಡಗಳು ಮಾತ್ರ ಶಿಥಿಲಾವಸ್ಥೆಯಲ್ಲಿರುತ್ತದೆ.

ಈ) ಸಂಪೂರ್ಣ ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳನ್ನು 2009–10ನೇ ಸಾಲಿನಲ್ಲಿ ಮಂಜೂರಾದ ಅನುದಾನದಲ್ಲಿ ದುರಸ್ಥಿಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

652 ಶ್ರೀ ಮಂಜುನಾಥ್ ಹೆಚ್.ಪಿ. : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಣಸೂರು ತಾಲ್ಲೂಕಿನ ಶೆಟ್ಟಿಹಳ್ಳಿ–ಲಕ್ಕ ಪಟ್ಟಣ ಅರಣ್ಯ ಪ್ರದೇಶದಲ್ಲಿ ಕೇಂದ್ರ ಸರ್ಕಾರದ ಅರಣ್ಯ ಮತ್ತು ಪರಿಸರ ಮಂತ್ರಾಲಯ ಪ್ರಾಯೋಜಿತ ಗಿರಿಜನ ಪುನರ್ ವಸತಿ ಯೋಜನೆಯಡಿಯಲ್ಲಿ ಗಿರಿಜನರಿಗಾಗಿ ವಸತಿ ನಿರ್ಮಾಣ ಯೋಜನೆಯನ್ನು ಕೈಗೊಳ್ಳಲಾಗಿದೆಯೇ;

ಆ) ಕೈಗೊಂಡಿದ್ದಲ್ಲಿ ಸದರಿ ಯೋಜನೆಗೆ ಮಂಜೂರಾದ ಅನುದಾನವೆಷ್ಟು ಮತ್ತು ಎಷ್ಟು ಮನೆಗಳನ್ನು ನಿರ್ಮಿಸಲಾಗುತ್ತಿದೆ. (ಫಲಾನುಭವಿಗಳ ವಿವರ ನೀಡುವುದು);